# ಪ್ರಾರ್ಥನೆ

## ಭಾಗವತದಿಂದ

(ಕುಂತಿಯ ಪ್ರಾರ್ಥನೆ)

**ಜನ್ಮೈಶ್ವರ್ಯಶ್ರುತಶ್ರೀಭಿರೇಧಮಾನಮದಃ ಪುಮಾನ್ ।**
**ನೈವಾರ್ಹತ್ಯಭಿಧಾತುಂ ವೈ ತ್ವಾಮಕಿಂಚನಗೋಚರಮ್ ॥**

ನೀನು ಏನೂ ಇಲ್ಲದ ದರಿದ್ರರಿಗೆ ಮಾತ್ರ ಗೋಚರನಾಗುವವನು. ಕುಲಮದ, ಅಧಿಕಾರಮದ, ವಿದ್ಯಾಮದ, ಸಂಪತ್ತಿನ ಮದ ಮುಂತಾದವುಗಳಿಂದ ಬೀಗುವ ಮನುಷ್ಯನಿಗೆ ನಿನ್ನ ನಾಮೋಚ್ಚಾರಣೆ ಮಾಡುವ ಅರ್ಹತೆ ಉಂಟಾಗುವುದಿಲ್ಲ.

**ನಮೋಽಕಿಂಚನವಿತ್ತಾಯ ನಿವೃತ್ತಗುಣವೃತ್ತಯೇ ।**
**ಆತ್ಮಾರಾಮಾಯ ಶಾಂತಾಯ ಕೈವಲ್ಯಪತಯೇ ನಮಃ ॥**

ಏನೂ ಇಲ್ಲದವನಿಗೆ ಎಲ್ಲ ಐಶ್ವರ್ಯವೂ ನೀನೇ, ನೀನು ತ್ರಿಗುಣಗಳನ್ನೂ ಅದರ ಕಾರ್ಯಗಳನ್ನೂ ಮೀರಿರುವವನು, ಆತ್ಮಾರಾಮನು, ಪ್ರಶಾಂತನು, ಕೈವಲ್ಯಮೋಕ್ಷಕ್ಕೆ ಅಧಿಪತಿಯು. ಇಂತಹ ನಿನಗೆ ನಮಸ್ಕಾರಗಳು.

**ಮನ್ಯೇ ತ್ವಾಂ ಕಾಲಮೀಶಾನಮ್ ಅನಾದಿನಿಧನಂ ವಿಭುಮ್ ।**
**ಸಮಂ ಚರಂತಂ ಸರ್ವತ್ರ ಭೂತಾನಾಂ ಯನ್ಮಿಥಃ ಕಲಿಃ ॥**

ಅನಾದಿಯೂ, ಅನಂತನೂ, ಸರ್ವವ್ಯಾಪಕನೂ, ಸರ್ವನಿಯಾಮಕನೂ ಆಗಿರುವ ಕಾಲರೂಪಿಯಾದ ಪರಮೇಶ್ವರನು ನೀನೇ ಎಂದು ತಿಳಿಯುತ್ತೇನೆ. ಪ್ರಪಂಚದಲ್ಲಿ ಎಲ್ಲ ಭೂತಗಳೂ ಪರಸ್ಪರ ವೈಷಮ್ಯದಿಂದ ಘರ್ಷಣೆ ಮಾಡುತ್ತಿರುವಾಗ, ಎಲ್ಲದರಲ್ಲೂ ಸಮಾನರೂಪದಿಂದ ಸಂಚರಿಸುತ್ತಿರುವವನು ನೀನೊಬ್ಬನೇ.

**ನ ವೇದ ಕಶ್ಚಿದ್ಭಗವಂಶ್ಚಿಕೀರ್ಷಿತಂ**
**ತವೇಹಮಾನಸ್ಯ ನೃಣಾಂ ವಿಡಂಬನಮ್ ।**
**ನ ಯಸ್ಯ ಕಶ್ಚಿದ್ ದಯಿತೋಽಸ್ತಿ ಕರ್ಹಿಚಿತ್**
**ದ್ವೇಷ್ಯಶ್ಚ ಯಸ್ಮಿನ್ ವಿಷಮಾ ಮತಿರ್ನೃಣಾಮ್ ॥**

ಓ ಭಗವಂತ! ನಿನಗೆ ಯಾರೂ ಯಾವ ರೀತಿಯಲ್ಲಿಯೂ ಪ್ರೀತಿಪಾತ್ರನೂ ಆಗಿಲ್ಲ, ಶತ್ರುವೂ ಆಗಿಲ್ಲ. ಆದರೆ ಜನರ ಬುದ್ಧಿಯು ಮಾತ್ರ ನಿನ್ನ ವಿಷಯದಲ್ಲಿ ವಿಷಮವಾಗಿರುತ್ತದೆ. ಮನುಷ್ಯರ ಮಧ್ಯೆ ಅವತರಿಸಿ, ಮನುಷ್ಯರಂತೆ ಅಭಿನಯ ಮಾಡುತ್ತಿರುವ ನಿನ್ನ ಸಂಕಲ್ಪವೇನು? ನಿಜವಾಗಿಯೂ ನೀನು ಏನು ಮಾಡಬೇಕೆಂದಿರುವೆ ಎಂಬುದು ಯಾರಿಗೂ ತಿಳಿಯದು.

**ಜನ್ಮ ಕರ್ಮ ಚ ವಿಶ್ವಾತ್ಮನ್ ಅಜಸ್ಯ ಅಕರ್ತುರಾತ್ಮನಃ ।**
**ತಿರ್ಯಙ್ ನೃಷಿಷು ಯಾದಃಸು ತದತ್ಯಂತವಿಡಂಬನಮ್ ॥**

ಇಡೀ ವಿಶ್ವಕ್ಕೆ ಆತ್ಮನಾಗಿರುವವನೇ, ನೀನು ಜನ್ಮ-ಕರ್ಮರಹಿತನಾದ ಶುದ್ಧಾತ್ಮಸ್ವರೂಪನೇ ಆಗಿದ್ದರೂ, ಲೋಕದ ಲೀಲೆಗಾಗಿ ಪಶು-ಪಕ್ಷಿ ಮುಂತಾದವುಗಳಲ್ಲಿ, ಮನುಷ್ಯರಲ್ಲಿ, ಮುನಿಗಳಲ್ಲಿ, ಜಲಚರಗಳಲ್ಲಿಯೂ ಜನ್ಮತಾಳಿ, ಆ ಜನ್ಮಗಳಿಗೆ ಅನುರೂಪವಾದ ಕಾರ್ಯಗಳನ್ನು ಮಾಡುತ್ತಿರುವೆ.

# ಸೂಕ್ತಿಪ್ರಭ

## ಮಕ್ಕಳು

ಒಂದು ಮಗುವಿನ ಹತ್ತಿರ ಹೋದಾಗ, ನಾನು ಎರಡು ಭಾವನೆಗಳಿಂದ ಸ್ಫೂರ್ತಿಗೊಳ್ಳುತ್ತೇನೆ: ಆಗ ಆ ಮಗು ಇರುವುದನ್ನು ನೋಡಿ, ಮೃದುಭಾವನೆಯಿಂದ; ಅದು ಮುಂದೆ ಏನಾಗಬಹುದು ಎಂದು ಕಲ್ಪಿಸಿಕೊಂಡು, ಗೌರವದಿಂದ.

*–ಲೂಯಿ ಪ್ಯಾಶ್ಚರ್*

ತಮ್ಮ ಹಿರಿಯರು ಹೇಳಿದ್ದನ್ನು ಕೇಳುವಲ್ಲಿ, ಮಕ್ಕಳು ಯಾವತ್ತೂ ಸೋಲುತ್ತಾರೆ. ಆದರೆ ಅವರನ್ನು ಅನುಕರಣೆ ಮಾಡುವುದರಲ್ಲಲ್ಲ. *–ಜೇಮ್ಸ್ ಬಾಲ್ಡ್‌ವಿನ್*

ಮಕ್ಕಳು ನಮ್ಮ ಅತ್ಯಂತ ಅಮೂಲ್ಯವಾದ ನೈಸರ್ಗಿಕ ಸಂಪನ್ಮೂಲ. *–ಹರ್ಬರ್ಟ್ ಹೂವರ್*

ನಿಮ್ಮ ಬಾಳಿನಲ್ಲಿ ನೀವು ಎಷ್ಟು ಮುಂದುವರಿಯುವಿರಿ ಎಂಬುದು, ಸಣ್ಣವರೊಡನೆ ಎಷ್ಟು ಮೃದುವಾಗಿರುತ್ತೀರಿ, ವಯಸ್ಸಾದವರಿಗೆ ಎಷ್ಟು ಅನುಕಂಪೆ ತೋರಿಸುತ್ತೀರಿ, ದುರ್ಬಲರ ಜೊತೆ ಎಷ್ಟು ಸಹನೆಯಿಂದ ಇರುತ್ತೀರಿ, ಶಕ್ತಿಯುಳ್ಳವರ ಜೊತೆಗೆ ಎಷ್ಟು ಪರಿಶ್ರಮ ಪಡುತ್ತೀರಿ ಎನ್ನುವುದರ ಮೇಲೆ ಅವಲಂಬಿತವಾಗಿದೆ. ಏಕೆಂದರೆ, ಯಾವಾಗಲಾದರೂ ಒಮ್ಮೆ ನಿಮ್ಮ ಜೀವನದಲ್ಲಿ ಆ ಎಲ್ಲ ಪಾತ್ರಗಳನ್ನೂ ನೀವು ನಿರ್ವಹಿಸಿಯೇ ತೀರುತ್ತೀರಿ.

*–ಜಾರ್ಜ್ ವಾಷಿಂಗ್‌ಟನ್ ಕಾರ್ವರ್*

ಸಂತಾನಾಪೇಕ್ಷೆ ಇದ್ದವರು ಜವಾಬ್ದಾರಿಗೆ ಸಿದ್ಧರಾಗಿರಲೇ ಬೇಕು.

*–ಮಹಾತ್ಮ ಗಾಂಧಿ*

ಕೇವಲ ಶಾಲೆಯಲ್ಲಿ ಮಾತ್ರ ಶಿಕ್ಷಣ ಪಡೆಯುವ ಮಗು ನಿಜವಾಗಿಯೂ ಅಶಿಕ್ಷಿತ ಮಗು. *–ಜಾರ್ಜ್ ಸಾಂತಾಯನ*

ನೀವು ಮಕ್ಕಳಿಗೆ ಮಾಡುವುದಾವುದೂ ವ್ಯರ್ಥವಾಗುವುದಿಲ್ಲ. ಅವರು ಅದಕ್ಕೆ ಕಣ್ಣುಮುಚ್ಚಿಕೊಂಡು, ಗಮನಿಸದಂತೆ ಇರುತ್ತಾರೆ; ಅದಕ್ಕಾಗಿ ನಿಮಗೆ ಧನ್ಯವಾದಗಳನ್ನು ಹೇಳುವುದು ವಿರಳ. ಆದರೂ ನಿಮ್ಮ ಮಕ್ಕಳಿಗೆ ಮಾಡುವುದಾವುದೂ ವ್ಯರ್ಥವಾಗುವುದಿಲ್ಲ. *–ಗ್ಯಾರಿಸನ್ ಕೈಲ್ಲರ್*

ಕೇವಲ ಬೋಧನೆಗಿಂತ ಹೆಚ್ಚಾಗಿ ಮಾರ್ಗದರ್ಶನ ಮತ್ತು ಕರುಣೆಗಳೇ ಮಕ್ಕಳಿಗೆ ಅವಶ್ಯವಾಗಿ ಬೇಕಾಗಿರುವುದು.

*–ಆ್ಯನ್ ಸಲಿವಾನ್*

ಪೋಷಕರು ತಮ್ಮ ಮಕ್ಕಳನ್ನು ಒಳ್ಳೆಯ ದಾರಿಗೆ ತರಲು ಮಾರ್ಗದರ್ಶನ ನೀಡಬಹುದಷ್ಟೆ ಆದರೆ ಕಡೆಯದಾಗಿ, ಒಬ್ಬ ಮನುಷ್ಯನ ಚಾರಿತ್ರ್ಯವು ಅವನ ಕೈಯಲ್ಲೇ ಇದೆ. *– ಆ್ಯನ್ ಫ್ರಾಂಕ್*

ಮಕ್ಕಳನ್ನು ಮುಗ್ಗರಿಸಲು ಬಿಡಿ. ಅಂತಹ ಎಡರು ತೊಡರುಗಳಿಂದ ಅವರ ಜೀವನ ಸುಭದ್ರವಾಗುತ್ತದೆ. *–ಜಲಾಲ್ ಅಫ್ಘಾನಿ*